**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 36/2024**

**ಚಾ.ಸಾಃ 6, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ದಯಾನಂದ ಅಂಬಿಗ |
| ಗಂಡನ ಹೆಸರು | ಶಂಕರ ಅಂಬಿಗ |
| ವಯಸ್ಸು | 30 ವರ್ಷಗಳು |
| ಉದ್ಯೋಗ | ಖಾಸಗಿ ಕೆಲಸ |
| ವಾಸ್ತವ್ಯ | ಉಪ್ಪಿನಪಟ್ಟಣ, ಕುಮಟಾ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 18-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ದಿಃ 25-11-2023 ರಂದು ಸಂಜೆ 5.00 ಗಂಟೆ ಸುಮಾರಿಗೆ ನನ್ನ ಸ್ನೇಹಿತೆಯಾದ ಮೃತ ತ್ರೀವೇಣಿ ಗಣಪತಿ ಅಂಬಿಗರವರನ್ನು ನನ್ನ ಬೈಕ ಸಂಖ್ಯೆ ಕೆಎ-04-ಜೆಎಕ್ಸ-4142 ರಲ್ಲಿ ಕೂರಿಸಿಕೊಂಡು ಆಕೆಯನ್ನು ಅವರ ಮನೆಯಾದ ಕರಿಕುರ್ವಾಕ್ಕೆ ಬಿಡಲು ಹೊನ್ನಾವರದಿಂದ ಗೇರುಸೊಪ್ಪ ಮಾರ್ಗವಾಗಿ ಹೋಗುತ್ತಿದ್ದೆವು. ಈ ರೀತಿ ಹೋಗುವಾಗ ಮುಗ್ವಾ ಗ್ರಾಮದ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ರಾಷ್ಟ್ರೀಯ ಹೆದ್ದಾರಿಯಿಂದ ಹೋಗುತ್ತಿದ್ದಾಗ ಎದುರಿನಿಂದ ಒಂದು ಕಾರು ತನ್ನ ಮುಂದಿನಿಂದ ಹೋಗುತ್ತಿದ್ದ ಬೈಕನ್ನು ಓವರ್ ಟೇಕ್ ಮಾಡಲು ರಸ್ತೆಯ ಬಲ ಬದಿಗೆ ತಿರುಗಿ ನಾನು ಹೋಗುತ್ತಿದ್ದ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದನು. ಸದ್ರಿ ಅಪಘಾತದಿಂದ ನಾನು ಮತ್ತು ತ್ರೀವೇಣಿ ಕೆಳಗೆ ಬಿದ್ದೆವು. ಸದ್ರಿ ಅಪಘಾತದಿಂದ ನನ್ನ ಬಲ ಕಾಲಿನಲ್ಲಿ 3 ಕಡೆ ಮೂಳೆ ಮುರಿದಿತ್ತು. ತ್ರೀವೇಣಿಯವರ ಮುಖಕ್ಕೆ ತಲೆಗೆ ಗಾಯ ಆಗಿತ್ತು. ಕಾರಿನಲ್ಲಿದ್ದವರಿಗೆ ಯಾವುದೇ ಗಾಯವಾಗಿರಲಿಲ್ಲ. ಅಲ್ಲಿದ್ದವರು ತ್ರೀವೇಣಯವರನ್ನು ಯಾವುದೋ ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನನ್ನು 108 ಅಂಬುಲೆನ್ಸ ಮೂಲಕ ಹೊನ್ನಾವರ ಸರಕಾರಿ ಆಸ್ಪತ್ರೆಗೆ ತಂದಿರುತ್ತಾರೆ. ತ್ರೀವೇಣಿಯವರು ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮರುದಿನ ಆಕೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾಳೆ. ಅಪಘಾತಪಡಿಸಿದ ಕಾರ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತನು ಕಾರನ್ನು ವೇಗವಾಗಿ ಬಲಕ್ಕೆ ತಿರುಗಿಸಿ ನನ್ನ ಎದುರಿನಲ್ಲಿ ಬಂದಿದ್ದರಿಂದ ನನಗೆ ಡಿಕ್ಕಿಪಡಿಸಿದ್ದು, ಆತನ ತಪ್ಪಿಂದ ಅಪಘಾತ ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್.ಎನ್.ಎಸ್.ರಿಂದಃ**

ಮೃತ ತ್ರೀವೇಣಿ ನನ್ನ ಸ್ನೇಹಿತೆ. ನಾನು ತ್ರೀವೇಣಿಯನ್ನು ಮದುವೆ ಆಗಿಲು ಕೇಳಿದ್ದೆ ಆದರೆ ಆಕೆ ಒಪ್ಪಿರಲಿಲ್ಲ. ಆಕೆ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಳು. ನನ್ನ ಪ್ರೀತಿಯನ್ನು ಬೇಡ ಎಂತ ಅವರ ಕುಟಂಬದವರು ಹೇಳಿದರು ಎಂದರೆ ಸರಿಯಲ್ಲ. ಮೃತ ತ್ರೀವೇಣಿಯ ಮಾವ ಸುಬ್ರಹ್ಮಣ್ಯ ಅಂಬಿಗ ರವರ ಅಂಗಡಿ ಅಪಘಾತ ಸ್ಥಳದ ಹತ್ತಿರದಲ್ಲಿಯೇ ಇದೆ. ನಾನು ತ್ರೀವೇಣಿಯ ಜೊತೆ ಓಡಾಡುವುದು ಬೇಡ ಎಂದು ಸುಬ್ರಹ್ಮಣ್ಯರವರು ಎಚ್ಚರಿಕೆ ನೀಡಿದ್ದರು ಎಂದರೆ ಸರಿಯಲ್ಲ. ಕರಿಕುರ್ವಾಕ್ಕೆ ಹೋಗುವ ಮೊದಲು ನಾನು ಮತ್ತು ತ್ರೀವೇಣಿ ಗೋಕರ್ಣಕ್ಕೆ ಹೋಗಿದ್ದೇವು. ಸಂಜೆ 4.00 ರಿಂದ 4.30 ಸಮಯಕ್ಕೆ ಗೋಕರ್ಣದಿಂದ ಬಂದಿದ್ದೆವು. ಗೋಕರ್ಣದಿಂದ ಬರುವಾಗ ಮಾರ್ಗ ಮಧ್ಯದಲ್ಲಿ ಬೈಕನ್ನು ಎಲ್ಲಿಯೂ ನಿಲ್ಲಿಸಿಲ್ಲ. ತ್ರೀವೇಣಿಯವರ ಮನೆಗೆ ಹೋಗಬೇಕಾದರೆ ಸುಬ್ರಹ್ಮಣ್ಯ ರವರ ಅಂಗಡಿಯ ಮುಂದೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗಬೇಕಾಗುತ್ತದೆ ಎಂದರೆ ಸರಿ. ಆತನ ಅಂಗಡಿಯ ಮುಂದೆ ನಾನು ಬೈಕಿನಲ್ಲಿ ಹೋಗುವಾಗ ನಮ್ಮ ಮುಖ ಅವರಿಗೆ ಕಾಣಬಾರದು ಎಂದು ನಾವು ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡು ನಾನೇ ಬೈಕನ್ನು ಓಡಿಸಿಕೊಂಡು ನನ್ನದೇ ತಪ್ಪಿಂದ ಕಾರಿಗೆ ಡಿಕ್ಕಿಪಡಿಸಿಕೊಂಡು ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

ರಾಷ್ಟ್ರೀಯ ಹೆದ್ದಾರಿ ಸುಮಾರು 24 ಅಡಿ ಅಗಲ ಇರಬಹುದು. ರಾಷ್ಟ್ರೀಯ ಹೆದ್ದಾರಿಯ ಎರಡೂ ಕಡೆ ಮತ್ತು ಮಧ್ಯದಲ್ಲಿ ಬಿಳಿ ಪಟ್ಟಿ ಇದೆ ಎಂದರೆ ಸರಿ. ಅಪಘಾತ ಆಗುವ ಪೂರ್ವದಲ್ಲಿ ಸುಮಾರು 20 ಅಡಿ ದೂರದಲ್ಲಿ ಕಾರು ಎದುರಿನಿಂದ ಬಂದಿರುವುದನ್ನು ನೋಡಿರುತ್ತೇನೆ. ಕಾರಿನ ಮುಂಭಾಗದಲ್ಲಿ ಒಂದು ಬೈಕ ಬರುತ್ತಿತ್ತು. ಯಾವುದೇ ಲಾರಿ ಬರುತ್ತಿರಲಿಲ್ಲ. ನನ್ನ ಬೈಕಿನ ಮುಂದೆ ಯಾವುದೇ ವಾಹನ ಹೋಗತ್ತಿರಲಿಲ್ಲ. ನನ್ನ ಎದುರಿನಲ್ಲಿ ಬರುತ್ತಿದ್ದ ಬೈಕು ರಸ್ತೆ ಮಧ್ಯದಲ್ಲಿರುವ ಬಿಳಿ ಪಟ್ಟೆಯಿಂದ ಸುಮಾರು 3 ಅಡಿ ದೂರದಿಂದ ಬರುತ್ತಿತ್ತು. ನಾನು ನೋಡಿದಾಗ ಬೈಕಿನಿಂದ 4-5 ಅಡಿ ಅಂತರದಲ್ಲಿ ಹಿಂದಿನಿಂದ ಕಾರು ಬರುತ್ತಿತ್ತು. ನಾನು ರಸ್ತೆಯ ಎಡ ಬದಿಯಲ್ಲಿರುವ ಬಿಳಿ ಪಟ್ಟೆ ಮತ್ತು ರಸ್ತೆಯ ಮಧ್ಯದಲ್ಲಿರುವ ಬಿಳಿ ಪಟ್ಟೆಯ ಮಧ್ಯದ ರಸ್ತೆಯಲ್ಲಿ ಹೋಗುತ್ತಿದ್ದೆ. ಎದುರಿನಲ್ಲಿ ಬರುತ್ತಿದ್ದ  ಕಾರು ತನ್ನ ಮುಂದೆ ಇದ್ದ ಬೈಕನ್ನು ಓವರ್ ಟೇಕ್ ಮಾಡಲು ಬಲಕ್ಕೆ ತಿರುಗಿಸಿಕೊಂಡು ನೇರವಾಗಿ ನನಗೆ ಬಂದು ಡಿಕ್ಕಿಪಡಿಸಿರುತ್ತದೆ. ಮುಂದೆ ಬರುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿಲ್ಲ. ಎದುರಿನಲ್ಲಿ ಬರುತ್ತಿದ್ದ ಕಾರು ರಸ್ತೆ ಮಧ್ಯದಲ್ಲಿರುವ ಬಿಳಿ ಪಟ್ಟೆಯಿಂದ ಎಷ್ಟು ಅಡಿ ಬಲ ಭಾಗಕ್ಕೆ ಬಂದಿರುತ್ತದೆಯೋ ಎಂದು ನನಗೆ ಹೇಳಲು ಆಗುವುದಿಲ್ಲ. ಈಗ ಸಾಕ್ಷಿಗೆ ಎರಡು ಫೊಟೋಗಳನ್ನು ತೋರಿಸಿ ಇದರಲ್ಲಿರುವ ಕಾರು ಅಪಘಾತಪಡಿಸಿರುವ ಕಾರು ಎಂದರೆ ಹೌದು ಎನ್ನುತ್ತಾರೆ. ಸದ್ರಿ ಫೊಟೋವನ್ನು ಅದರ ಸಿ ಡಿ ಹಾಜರುಪಡಿಸುವ ಮತ್ತು ಕಲಂ 65 ಬಿ ಸಾಕ್ಷ್ಯ ಅಧಿನಿಯಮದ ರುಜುವಾತಿನ ಷರತ್ತಿಗೆ ಒಳಪಟ್ಟು ನಿ.ಡಿ. 1 ಮತ್ತು 2 ಎಂದು ಗುರುತಿಸಲಾಯಿತು. ಅಪಘಾತ ಆದ ನಂತರ ತ್ರೀವೇಣಿ ರಸ್ತೆಯ ಒಂದು ಪಕ್ಕದಲ್ಲಿ ಹೋಗಿ ಬಿದ್ದಿರುತ್ತಾರೆ. ತ್ರೀವೇಣಿ ಬಿದ್ದ ಸ್ಥಳದಿಂದ ಎಷ್ಟು ದೂರದಲ್ಲಿ ಬೈಕ ಬಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ತ್ರೀವೇಣಿಗೆ ರಕ್ತ

ಬರುತ್ತಿತ್ತು, ಸ್ಥಳದಲ್ಲಿ ಬಿದ್ದಿತೋ ಎಂದು ನನಗೆ ಗೊತ್ತಿಲ್ಲ. ನನ್ನ ಬೈಕು ಯಾವ ದಿಕ್ಕಿಗೆ ಬಿದ್ದಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನಿ.ಡಿ. 2 ಫೋಟೋದಲ್ಲಿ ಕಾರಿನ ಹಿಂಭಾಗದಲ್ಲಿ ಜನ ನಿಂತಿರುವ ಸ್ಥಳದ ಕಚ್ಚಾ ರಸ್ತೆಯಲ್ಲಿ ತ್ರೀವೇಣಿ ಬಿದ್ದಿದ್ದಳು ಎಂದರೆ ಸರಿ. ನಾನು ಬೈಕಿಗೆ ಬ್ರೇಕ್ ಹಾಕಿದ್ದೆ. ರಸ್ತೆಯ ಮೇಲೆ ಬ್ರೇಕ್ ಮಾರ್ಕ ಬಿದ್ದಿತೋ ಇಲ್ಲವೋ ಎಂದು ಗೊತ್ತಿಲ್ಲ. ನಿ.ಡಿ. 1 ರ ಫೋಟೋದಲ್ಲಿ ಗೇರುಸೊಪ್ಪಾ ಕಡೆಗೆ ಹೋಗುವ ರಸ್ತೆಯಲ್ಲಿ ಬೈಕಿನ ಬ್ರೇಕ್ ಮಾರ್ಕ ಆಗಲಿ ರಕ್ತ ಬಿದ್ದ ಕಲೆಯಾಗಲಿ ಕಣುತ್ತಿಲ್ಲ ಎಂದರೆ ಸರಿ.

ಅಪಘಾತ ಆದ ನಂತರ ಬೈಕಿನ ಯಾವ ಭಾಗಗಳಿಗೆ ಡೇಮೇಜ್ ಆಗಿದೆ ಅಥವಾ ಚೂರಾಗಿದೆ ಎಂದು ಹೇಳಲು ಆಗುವುದಿಲ್ಲ. ಒಡೆದ ಭಾಗಗಳು ರಸ್ತೆಯ ಮೇಲೆ ಬಿದ್ದಿದ್ದವು ಎಂದರೆ ಸರಿ. ನಾನು ಹೋಗುತ್ತಿದ್ದ ಬೈಕ್ ಕೆ ಟಿ ಎಂ ಡ್ಯೂಕ್ ಬೈಕ್. ಸದ್ರಿ ಬೈಕ್ 1 ಲೀ ಪೆಟ್ರೋಲ್ ಗೆ 30-35 ಕಿ.ಮೀ. ಓಡುತ್ತದೆ. ಅಪಘಾತ ಆದ ನಂತರ ತ್ರೀವೇಣಿ ಕಚ್ಚಾ ರಸ್ತೆಯಲ್ಲಿ ಬಿದ್ದಿದ್ದಳು ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಪೊಲೀಸರಿಗೆ ಆರೋಪಿಯ ವಿವರವನ್ನು ನಾನು ನೀಡಿಲ್ಲ. ಅಪಘಾತವು ಸಂಪೂರ್ಣವಾಗಿ ನನ್ನ ತಪ್ಪಿನಿಂದಲೇ ಆಗಿದ್ದು, ಆರೋಪಿತನ ತಪ್ಪಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**